**ಓ ಎಸ್ ನಂಃ 214/2020**
**ಪಿ.ಡಬ್ಲ್ಯೂ - 1**
**ದಿನಾಂಕಃ 03-07-2024**

**<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಬಿ ವಕೀಲರಿಂದಃ</u>**

ಪ್ರತಿವಾದಿಗಳು ನನ್ನ ವಿರುದ್ದ ಬೇರೊಂದು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ವಿರುದ್ದ ಸಲ್ಲಿಸಿರುವಂತಹ ದಾವೆಯಲ್ಲಿ ನಾನು ವಕೀಲರನ್ನು ನೇಮಕಮಾಡಿ ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ನಾನು ಪ್ರತಿವಾದಿ ವಿರುದ್ದ ದಾವೆ ಸಲ್ಲಿಸಿರುತ್ತೇನೆ ಅವರು ಸಲ್ಲಿಸಿರುವುದಿಲ್ಲ. ಪ್ರತಿವಾದಿಗೆ ದಾವಾ ಸ್ವತ್ತು ಯಾವ ರೀತಿಯಾಗಿ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾವಾ ಸ್ವತ್ತು ಈಗ ಪ್ರತಿವಾದಿಯವರ ಹೆಸರಿನಲ್ಲಿಯೇ ಇರುತ್ತದೆ. ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ ಈಗ ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. 1983 ರಲ್ಲಿ ಪ್ರತಿವಾದಿಯರಿಗೆ ಸದರಿ ದಾವಾ ಸ್ವತ್ತು ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿ. ಸರ್ಕಾರದಿಂದ ಮಂಜೂರಾಗಿರುವಂತಹ ಜಾಗವನ್ನು 10 ರಿಂದ 15 ವರ್ಷಗಳ ಕಾಲ ಯಾರಿಗೂ ಮಾರಾಟ ಮಾಡಬಾರದೆಂದು ಷರತ್ತು ಇರುತ್ತದೆ ಎಂದರೆ ಸರಿ.

2. ನನಗೆ ಪ್ರತಿವಾದಿಯರು ಕ್ರಯದ ಕರಾರು ಯಾವ ವರ್ಷ ಮಾಡಿಕೊಟ್ಟಿರುತ್ತಾರೆ ಎಂದು ನೆನಪಿರುವುದಿಲ್ಲ. ಕ್ರಯದ ಕರಾರು ಪತ್ರ ನಿಪಿಃ 1 ಇದನ್ನು ಟೈಪ್ ಮಾಡಿಸಲಾಗಿರುತ್ತದೆ. ಕ್ರಯದ ಕರಾರು ಪತ್ರವನ್ನು ಮಾಡುವಾಗ ಯಾರೆಲ್ಲಾ ಹಾಜರಿದ್ದರು ಎಂದು ನನಗೆ ಈಗ ನೆನಪಿಲ್ಲ . ಕ್ರಯದ ಕರಾರು ಪತ್ರವನ್ನು ಎಷ್ಟು ಹಣಕ್ಕೆ ಮಾಡಿಕೊಂಡಿರುತ್ತೇವೆ ಎಂದು ನನಗೆ ಗೊತ್ತಿಲ್ಲ. ಕ್ರಯದ ಕರಾರು ಪತ್ರದಲ್ಲಿ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪಂಚಾಯಿತಿಯಿಂದ ಪರವಾನಿಗೆ ಪಡೆದುಕೊಂಡು ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ . ನಿಪಿಃ 1 ನ್ನು ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

3. ಮಾರುತಿ ಎನ್ನುವ ವ್ಯಕ್ತಿಯೊಂದಿಗೆ ಸದರಿ ಕ್ರಯದ ಕರಾರು ಪತ್ರವನ್ನು ನಾನು ಸೃಷ್ಟಿಸಿಕೊಂಡಿರುತೇನೆ ಎಂದು ನನ್ನೊಂದಿಗೆ ಗಲಾಟೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಮಾರುತಿ ಎಂಬ

**ಓ ಎಸ್ ನಂಃ 214/2020**
**ಪಿ.ಡಬ್ಲ್ಯೂ - 1**
**ದಿನಾಂಕಃ 03-07-2024**

ವ್ಯಕ್ತಿಯು ಬೇರೆಯವರೊಂದಿಗೆ ಗಲಾಟೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ನಾನು ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಯರಿಗೆ ವಕೀಲರ ಮೂಲಕ ನೋಟೀಸ್ ನೀಡಿರುವುದಿಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹೊಸದುರ್ಗ.